ಡಾ॥ ಕೆ. ಸುಧಾಕರ್
Dr. K. SUDHAKAR

GOVERNMENT OF KARNATAKA

ವೈದ್ಯಕೀಯ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ
Minister For Medical Education
Government of Karnataka

ಸಂಖ್ಯೆ:ವೈಶಿಸ / 282 /2020 ದಿನಾಂಕ 19.03.2020

**ಟಿಪ್ಪಣಿ**

ಮೈಸೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿನ ಸೌಲಭ್ಯಗಳು, ಜನರಿಗೆ ನೀಡುತ್ತಿರುವ ಸೇವೆಗಳು ಮತ್ತು ಅಲ್ಲಿನ ವೈದ್ಯರು / ಸಿಬ್ಬಂದಿಗಳು ರೋಗಿಗಳನ್ನು ಉಪಚರಿಸುವ ರೀತಿಯು ಉತ್ಕೃಷ್ಟವಾಗಿದ್ದು, ಅಂತರಾಷ್ಟ್ರೀಯ ಮಟ್ಟದಲ್ಲಿದೆ ಹಾಗೂ ಇದು ಅನುಕರಣೀಯವೂ ಆಗಿದೆ. ಇದು ಕಾರ್ಪೋರೇಟ್ ಆಸ್ಪತ್ರೆಯ ರೀತಿಯಲ್ಲಿದ್ದು, ತಮ್ಮ ಆಸ್ಪತ್ರೆಯು ತನ್ನದೇ ಆದ ರೀತಿಯಲ್ಲಿ ಆರ್ಥಿಕ ಸಂಪನ್ಮೂಲವನ್ನು ಕ್ರೂಢೀಕರಿಸಿಕೊಳ್ಳುತ್ತಿರುವ ವಿಧಾನವು ಸಹ ಅನುಕರಣೀಯವಾಗಿರುತ್ತದೆ. ಇದನ್ನು ಸಾಧ್ಯವಾಗಿಸಿದ್ದಕ್ಕೆ ತಾವು ಹಾಗೂ ಸಂಬಂಧಿಸಿದ ಎಲ್ಲರೂ ಸಹ ಅಭಿನಂದನಾರ್ಹರು.

ಈ ಆಸ್ಪತ್ರೆಯ ಮಾದರಿಯಲ್ಲಿಯೇ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವೈದ್ಯಕೀಯ ಕಾಲೇಜುಗಳು / ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದೆ.

- ಎಲ್ಲಾ ವೈದ್ಯಕೀಯ ಕಾಲೇಜುಗಳು / ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ವಂತ ಆರ್ಥಿಕ ಸಂಪನ್ಮೂಲವನ್ನು ಕ್ರೂಢೀಕರಿಸಿಕೊಳ್ಳುವ ನಿಟ್ಟಿನಲ್ಲಿ ಸುಸ್ಥಿರಗೊಳಿಸಲು ಯೋಜನೆ / ಕಾರ್ಯಕ್ರಮಗಳನ್ನು ರೂಪಿಸಿ ಸರ್ಕಾರಕ್ಕೆ ಸಲ್ಲಿಸುವುದು.
- ವೈದ್ಯಕೀಯ ಕಾಲೇಜುಗಳ ಆಡಳಿತವನ್ನು ಯಾವ ರೀತಿ ನಿರ್ವಹಿಸಬೇಕೆಂಬ ಬಗ್ಗೆ ಎಲ್ಲಾ ಸಂಸ್ಥೆಗಳ ನಿರ್ದೇಶಕರು / ಅಧಿಕಾರಿಗಳಿಗೆ ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲು ಕ್ರಮವಹಿಸುವುದು.

(ಡಾ:ಕೆ.ಸುಧಾಕರ್)

**ಇವರಿಗೆ:**

ನಿರ್ದೇಶಕರು,
ಶ್ರೀ ಜಯದೇವ ಹೃದ್ರೋಗ ವಿಜ್ಞಾನಗಳ ಸಂಸ್ಥೆ,
ಬನ್ನೇರುಘಟ್ಟ ರಸ್ತೆ,
ಬೆಂಗಳೂರು–560069